ತಾವು ದಯವಿಟ್ಟು ಇದನ್ನು ಗಂಭೀರ ವಿಷಯವನ್ನಾಗಿ ಪರಿಗಣಿಸಿ ತಮ್ಮ ಮೂಲಕ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ನನ್ನ ವಿನಂತಿ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಉಪ ಮುಖ್ಯ ಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂಥ ವಿಷಯ ಕಂದಾಯ ಇಲಾಖೆಗೆ ಸಂಬಂಧಿಸಿರುವಂಥ ವಿಚಾರದಲ್ಲಿ entry ಮಾಡುವ ಸಲುವಾಗಿ ಆಗಿರುವ ತೊಂದರೆಗಳನ್ನು ಗಮನಕ್ಕೆ ತರುವ ಕೆಲಸವನ್ನು ಮಾಡುತ್ತೇನೆ. ಎರಡನೆಯ ವಿಚಾರದಲ್ಲಿ deemed forest ಎಂದು ಇದ್ದುದ್ದನ್ನು ಬದಲಾಯಿಸಬೇಕು ಎನ್ನುವ ವಿಚಾರದಲ್ಲಿ ಬಹುಶಃ ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಮಾಡಬೇಕಾಗಿರುವಂಥ ಕೆಲಸವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಅದಕ್ಕೆ ಪೂರಕವಾಗಿ ಚಿಂತನೆ ಮಾಡಬೇಕಾಗುತ್ತದೆ.

2. ವಿಷಯ : ಸದಾಶಿವ ಆಯೋಗದ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಲು ಬಂದಂಥ ಜನರ ಮೇಲೆ ನಡೆದ ಲಾಠಿ ಚಾರ್ಜ್‌ನಿಂದಾಗಿ ಅನೇಕ ಜನರು ಗಂಭೀರವಾಗಿ ಗಾಯಗೊಂಡಿರುವ ಬಗ್ಗೆ ಹಾಗೂ ಈ ಸಂಬಂಧ ಸದರಿ ಜನರ ಮೇಲೆ ಹಾಕಲಾಗಿರುವ ಪೊಲೀಸ್ ಕೇಸ್‌ಗಳನ್ನು ಹಿಂತೆಗೆದುಕೊಳ್ಳುವ ಕುರಿತು.

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ (ಪೂರ್ವ)) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಮೊನ್ನೆ ನಡೆದಂಥ ಸದಾಶಿವ ಆಯೋಗದ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಲು ಜನರು ಬಂದ ಸಂದರ್ಭದಲ್ಲಿ ತುಂಬಾ ಲಾಠಿ ಚಾರ್ಜ್ ಮಾಡಿದ್ದರಿಂದ ಮತ್ತು Tear Gas ನಿಂದ ಒಟ್ಟು 27 ಜನ ಗಾಯಗೊಂಡಿದ್ದಾರೆ. ಅದರಲ್ಲಿ 10 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಕೆಲವರು ಕೈ–ಕಾಲು ಮುರಿದು ಕೊಂಡಿದ್ದಾರೆ, ಕೆಲವರು ಆಸ್ಪತ್ರೆಯಲ್ಲಿದ್ದಾರೆ. ಅವರು ಡಾ: ಅಂಬೇಡ್ಕರ್ ಪುತ್ಥಳಿಗೆ ಮತ್ತು ರಾಣಿ ಚೆನ್ನಮ್ಮ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸರ್ಕಾರಕ್ಕೆ

ಮನವಿ ಕೊಡುವುದಕ್ಕೆ ರ್ಯಾಲಿ ಮೂಲಕ ಬಂದರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಂತ ರೀತಿಯಿಂದ ಬಂದು ಮನವಿ ಕೊಡುವ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಈ ರ್ಯಾಲಿಗೆ ಸಂಬಂಧಪಡದಂತಹ ಕುಕೃತ್ಯಗಳನ್ನು ಮಾಡಿದ್ದಾರೆ. ಅದರ ಪರಿಣಾಮವಾಗಿ ಹಳ್ಳಿಗಳಿಂದ ಬಂದ ಮುಗ್ಧ ಜನ, ಹೆಣ್ಣುಮಕ್ಕಳು, ಸಣ್ಣ ಮಕ್ಕಳು ಮತ್ತು ಯುವಕರಿಗೆ ಗಂಭೀರ ಗಾಯಗಳಾಗಿವೆ ಮತ್ತು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನ ಸೆಳೆಯುತ್ತಿರುವ ಉದ್ದೇಶವೆಂದರೆ, ಲಾಠಿ ಚಾರ್ಜ್ ಮತ್ತು ಜನರನ್ನು ಚದುರಿಸಲಿಕ್ಕೆ ಉಪ ಕ್ರಮಗಳು ಬೇರೆ ಇರುತ್ತವೆ. ಆದರೆ ಆ ಸಂದರ್ಭದಲ್ಲಿ ಗಟ್ಟಿ ಕೋಲಿನಿಂದ/ ಬಡಿಗೆಯಿಂದ ಹೊಡೆದಿರುವುದನ್ನು ನೋಡಿದರೆ, ಒಂದು ಕಿಲೋ ಮೀಟರ್ ಅಟ್ಟಿಸಿಕೊಂಡು ಹೋಗಿ ಹೊಡೆದಿದ್ದಾರೆ. ಆ ಹೊಡೆತ ತಡೆಯಲಾರದೆ ಕೆಲವರು ಬಾವಿಗೆ ಬಿದ್ದಿದ್ದಾರೆ. ಒಬ್ಬ ಬಿಜಾಪುರದ ಹುಡುಗ ಬಾವಿಗೆ ಜಿಗಿದು ಕಾಲು ಮುರಿದುಕೊಂಡಿದ್ದಾನೆ. ರಾತ್ರಿ 12–00 ಗಂಟೆ ಯವರೆಗೆ ಗುಡ್ಡಗಾಡು ಪ್ರದೇಶದಲ್ಲಿ ಜನ ವಾಸ ಮಾಡಿದ್ದಾರೆ. ನಾವು ಮುಖ್ಯಮಂತ್ರಿಯವರನ್ನು ಕಂಡು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೆ ಮತ್ತು ಅಧಿಕಾರಿಗಳನ್ನು ಕರೆದು ಹೇಳಿದರು. ಹೇಳಿದರೂ ಕೂಡ ಒಟ್ಟು ಈ ಪ್ರಕರಣಗಳಲ್ಲಿ ನಮ್ಮ ಗೃಹ ಮಂತ್ರಿಯವರು ಕೊಟ್ಟ ವರದಿಯಲ್ಲಿ ಕಲಂ 197, 143, 147, 148, 323, 324, 341, 427, 332, 336 ಮತ್ತು 504 ಕಲಂಗಳನ್ನು ಹಾಕಿದ್ದಾರೆ. ಇದು ಗಾಯದ ಮೇಲೆ ಪೆಟ್ಟು ಬಿದ್ದ ಹಾಗೆ, ಯಾವ ಮನುಷ್ಯ ಎಡವಿ ಬೆಟ್ಟು ಹೊಡೆದುಕೊಂಡಿರುತ್ತಾನೆ, ಅದೇ ಸ್ಥಳಕ್ಕೆ ಹೊಡೆತ ಬೀಳುವಂಥ ಸ್ಥಿತಿ ಯಾಗಿದೆ. ನ್ಯಾಯಯುತವಾದಂಥ ಅವರ ಬೇಡಿಕೆಗಳನ್ನು ಕೇಳಲು ಬಂದಾಗ ಅವರಿಗೆ ರಕ್ತಸ್ರಾವವಾಗುವ ರೀತಿಯಲ್ಲಿ ಹೊಡೆದಿರುವುದಲ್ಲದೆ ಅವರ ಮೇಲೆ ಕೇಸ್‌ಗಳನ್ನು ಹಾಕಿ ಇವತ್ತು ಪೊಲೀಸ್ ಇಲಾಖೆ ನೋಟೀಸ್ ಕೊಟ್ಟಿದೆ. ನಾನು ನಿನ್ನೆ ಆಸ್ಪತ್ರೆಯಲ್ಲಿ ವಿಠ್ಠಲ್‌ಸಗರಂ ಎನ್ನುವವರನ್ನು ಮಾತನಾಡಿಸಲು ಹೋದಾಗ ಅವರಿಗೆ ಪೊಲೀಸ್ ಇಲಾಖೆ ದಿನಾಂಕ 12.12.2012 ರಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಎ.ಪಿ.ಎಮ್.ಸಿ. ಪೊಲೀಸ್ ಠಾಣೆ, ಬೆಳಗಾವಿ ಈ ಮೂಲಕ ನಿಮಗೆ ತಿಳಿಸುವುದೇನೆಂದರೆ,

ಬಾಗೇವಾಡಿ ಪೊಲೀಸ್ ಠಾಣೆ, ಗುನ್ನಾ ನಂ.197/2012ರ ತನಿಖಾಧಿಕಾರಿಗಳ ಮುಂದೆ ಒಂದು ವಾರದೊಳಗಾಗಿ ಹಾಜರಾಗಬೇಕೆಂದು ಗಾಯಾಳುಗಳಿಗೆ ಬಂದು ಖುದ್ದಾಗಿ ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಇವತ್ತು ಶಾಂತಿಯುತ ಮೆರವಣಿಗೆ ಮಾಡಿ ಸರ್ಕಾರಕ್ಕೆ ಮನವಿ ಕೊಡಿಸಲು ಬಂದವರ ಮೇಲೆ ಈ ಕೇಸ್ ಹಾಕುವುದರ ಜೊತೆಗೆ ಅವರಿಗೆ ರಕ್ತಸ್ರಾವವಾಗುವ ರೀತಿಯಲ್ಲಿ ಹೊಡೆದಿರುವುದು ಒಂದು ಕೆಟ್ಟ ಇತಿಹಾಸವಾಗಿದೆ. ಅದಕ್ಕೋಸ್ಕರ ಇದು ತನಿಖೆಯಾಗಬೇಕು ಮತ್ತು ಈ ಎಲ್ಲಾ ಪ್ರಕರಣಗಳನ್ನು ಸರ್ಕಾರ ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲವಾದರೆ ಇದು ದಲಿತರ ದಮನ ನೀತಿಯಾಗಿದೆ, ಶೋಷಿತರನ್ನು ಮತ್ತಷ್ಟು ಹತ್ತಿಕ್ಕುವಂಥ ಕೆಲಸವಾಗಿದೆ ಇದಕ್ಕೆ ಗೃಹ ಇಲಾಖೆ ಮತ್ತು ಮಾನ್ಯ ಗೃಹ ಮಂತ್ರಿಗಳು ಈ ಅಧಿಕಾರಿಗಳು ಕೊಡುವಂಥ ವರದಿಯನ್ನು ಕೂಲಂಕಷವಾಗಿ ನೋಡಬೇಕು. ಎಲ್ಲಾ ಪ್ರಕರಣಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರು ಗಾಯಾಳುಗಳಿಗೆ ಸೂಕ್ತ ಪರಿಹಾರವನ್ನು ಕೊಟ್ಟು ಮುಂದಿನ ಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕು. ಎಲ್ಲಾ ಪ್ರಕರಣಗಳನ್ನು ನಿಖಾಲಿ ಮಾಡಬೇಕು, ತೆಗೆದುಹಾಕಬೇಕು. ಯಾವ ಉದ್ದೇಶಕ್ಕೆ ಈ ಆಯೋಗ ರಚನೆ ಮಾಡಬೇಕೆಂದು ಹೇಳಿ ಸರ್ಕಾರವೇ ಅದಕ್ಕೆ ದುಡ್ಡು ಕೊಟ್ಟು ಸಮೀಕ್ಷೆ ಮಾಡಿಸಿದೆಯೋ, ಅಂಥ ಸರ್ಕಾರದ ಸಮೀಕ್ಷಾ ವರದಿಯನ್ನು ಸರ್ಕಾರದಲ್ಲೇ ಇರುವವರು ವಿರೋಧ ಮಾಡುವುದು ಎಷ್ಟರಮಟ್ಟಿಗೆ ಸರಿ? ಇದನ್ನು ನಾನು ಬಹುವಾಗಿ ಖಂಡಿಸುತ್ತೇನೆ. ಇದು ರಾಜ್ಯದ್ಯಾದಂತ ಉಗ್ರವಾದ ಚಳುವಳಿ ಸ್ವರೂಪವನ್ನು ಪಡೆಯುತ್ತದೆ. ಇದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಇದಕ್ಕೆ ನಾನು ತೀವ್ರವಾಗಿ ಆಗ್ರಹ ಮಾಡುತ್ತೇನೆ. ನಾನು ಮೂರು ದಿವಸದಿಂದ ಕಾಯುತ್ತಿದ್ದೇನೆ. ಕೆಲವು ಕುಚೋದ್ಯ ವ್ಯಕ್ತಿಗಳು ಇದರಲ್ಲಿ ಬಹಳ ಆನಂದ ಪಡೆಯುತ್ತಿದ್ದಾರೆ. ಅವರಿಗೆ ಹಸಿವಿನ ಅರಿವಿಲ್ಲ. ಶ್ರೀಮಂತಿಕೆ ಸುಪ್ಪತ್ತಿಗೆಯಲ್ಲಿ ಐಷಾರಾಮಿ ಜೀವನ ಮಾಡುತ್ತಿದ್ದಾರೆ. ಅಂಥವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಡತನದ ಕಷ್ಟ ಏನು ಗೊತ್ತು? ಮೀಸಲಾತಿ ಯೋಜನೆ ಏನು ಗೊತ್ತು? ಇದನ್ನು ಖಂಡಿಸುತ್ತೇವೆ. ಇದು ರಾಜ್ಯಕ್ಕೆ

ಚಳುವಳಿಯಾಗಿ ಮಾರ್ಪಾಡಾಗುವುದನ್ನು ಸರ್ಕಾರ ತಡೆಯಬೇಕು. ಇದಕ್ಕೆ ನನ್ನ ತೀವ್ರ ವಿರೋಧವಿದೆ, ಖಂಡನೆ ಇದೆ. ಈ ಸಂದರ್ಭದಲ್ಲಿ ಎಸ್.ಪಿ. ಅವರು ಪ್ರಾರಂಭದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರಿಗೆ ಏಟು ಬಿದ್ದಿರುವುದಕ್ಕೆ ನಾನು ಕೂಡ ಇಲ್ಲಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಆದರೆ ಅದರ ತದನಂತರ ಘಟನೆ ಪೊಲೀಸಿನವರು ಸೇಡಿನ ಕ್ರಮದಲ್ಲಿ ಅಟ್ಟಾಡಿಸಿಕೊಂಡು ಹೊಡೆದಿರುವುದನ್ನು ನೋಡಿದರೆ ನಮಗೆ ಕರುಳು ಕತ್ತರಿಸಿ ಬರುತ್ತದೆ. ಇದಕ್ಕೆ ಒಬ್ಬರೂ ಕೂಡ ಮಾನವೀಯ ದೃಷ್ಟಿಯಿಂದ ಮಾತನಾಡಿಲ್ಲ. ಇದರಲ್ಲಿ ಅವರು ಸಂತೋಷವನ್ನು ಪಡುತ್ತಿದ್ದಾರೆ. ಇದಕ್ಕೆ ಹೊರಗಡೆ ಜನರು ನಿಮಗೆ ತಕ್ಕ ಪಾಠವನ್ನು ಕಲಿಸುತ್ತಾರೆ. ಇದನ್ನು ಬಹಳ ಎಚ್ಚರಿಕೆಯಿಂದ ನೋಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಮಾನ್ಯ ಗೃಹ ಮಂತ್ರಿಗಳು ನನಗೆ ಉತ್ತರವನ್ನು ಕೊಡಬೇಕು. ಎಲ್ಲಾ ಪ್ರಕರಣ ಗಳನ್ನು ತೆಗೆದು ಹಾಕಲಿಲ್ಲವೆಂದರೆ ಈಗ ನಾನು ಬಾವಿಗೆ ಬಂದು ಧರಣಿ ಕೂಡುತ್ತೇನೆ.

ಶ್ರೀ ಆರ್.ಅಶೋಕ್ (ಉಪ ಮುಖ್ಯಮಂತ್ರಿಗಳು ಮತ್ತು ಗೃಹ ಮತ್ತು ಸಾರಿಗೆ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ದಿ: 11–12–2012 ರಂದು ವಿಧಾನಸೌಧ ಮುತ್ತಿಗೆಗೆ ಕರೆಯನ್ನು ನೀಡಿತ್ತು. ಆ ಕರೆ ಸಂದರ್ಭದಲ್ಲಿ ನಾವು ಅವರ ಜೊತೆ ಮಾತನಾಡಿದಾಗ, ಭರತೇಶ ಜನಗೌಡ ಆಸ್ಪತ್ರೆ ಎದುರು ಅವರು ಅಲ್ಲಿ assemble ಆಗುತ್ತೇವೆ, ಅಲ್ಲಿಗೆ ಗೃಹ ಮಂತ್ರಿಯವರು ಬಂದರೆ ಅಲ್ಲಿ ನಾವು ಮನವಿಯನ್ನು ಕೊಡುತ್ತೇವೆ. ಅದನ್ನು ಸರ್ಕಾರಕ್ಕೆ ತಲುಪಿಸಬೇಕೆಂಬ ಮಾತುಕತೆ ಆಗಿತ್ತು. ರೈತರ ಚಳುವಳಿಯು ಆಯಿತು, ಆ ಸಂದರ್ಭದಲ್ಲಿಯೂ ಅದೇ ಜಾಗದಲ್ಲಿ ಅವರಿಗೆ ಗುರುತು ಮಾಡಲಾಗಿತ್ತು. ಅದೇ ರೀತಿ ಮಹಾರಾಷ್ಟ್ರ ಏಕೀಕರಣ ಸಮಿತಿಯೂ ಸಹ ಅಲ್ಲೇ ಹೋರಾಟಗಳನ್ನು ಮಾಡಿದರು. ಅವರಿಗೂ ಒಂದು ಸ್ಥಳವನ್ನು ನಿಗದಿ ಮಾಡಿದ್ದರು. ಆದರೆ, ಈ ಮುಖಂಡರುಗಳ ಜೊತೆ ನಾನು ಮಾತನಾಡಿದಾಗ, ನಾನು ಆ spot ಗೆ ಹೋಗಿದ್ದೆ. ಹೋಗಿದ್ದಾಗ ಅಲ್ಲಿ ಸುಮಾರು 1,000 ಜನ ಇದ್ದರು. ಅವರು

ನನಗೆ request ಮಾಡಿದರು. ಇದನ್ನೂ ಬೇರೆ ಬೇರೆ ಕಡೆಯಿಂದ ಜನರು ಬರುತ್ತಿದ್ದಾರೆ, ದಯವಿಟ್ಟು ನೀವು ಮಧ್ಯಾಹ್ನ 1.30 ಗಂಟೆಗೆ ಬರುವುದು ಬೇಡ. ಇನ್ನೊಂದು ಎರಡು ಗಂಟೆ ಬಿಟ್ಟು ನೀವು ಬನ್ನಿ, ನಾವು ಮನವಿ ಕೊಡುತ್ತೇವೆಂದು ನನಗೆ request ಮಾಡಿದರು. ನೀವು ಯಾವಾಗ ಕರೆದರೂ ನಾನು ಬರುತ್ತೇನೆಂದು ಹೇಳಿ ವಾಪಸ್ಸು ಬಂದು ವಿಧಾನ ಸಭಾ ಅಧಿವೇಶನದಲ್ಲಿ ಭಾಗವಹಿಸಿದೆ. ಅದಾದ ಮೇಲೆ ಮತ್ತೆ ನಾನು ಅಲ್ಲಿಗೆ ಹೋಗಬೇಕೆನ್ನುವ ಸಂದರ್ಭದಲ್ಲಿ ಬೇರೆ ಬೇರೆ ಕಡೆಯಿಂದ ಬಂದಂಥ ವ್ಯಕ್ತಿಗಳು ಅವರಿಗೆ ನಿಗದಿ ಪಡಿಸಿದ ಸ್ಥಳ ಬಿಟ್ಟು ನೇರವಾಗಿ ಸುವರ್ಣಸೌಧದ ಗೇಟ್ ಹತ್ತಿರ ಬಂದು ಬ್ಯಾರಿಕೇಡ್‌ಗಳನ್ನು ಕಿತ್ತು ಹಾಕುವಂಥ ವ್ಯವಸ್ಥೆಯನ್ನು ಮಾಡಿದರು. ನಮ್ಮ ಪೊಲೀಸರು ತಡೆದರು. ನಂತರ National Highway ಯಲ್ಲಿ ಸುಮಾರು ನಾವು 10 ನಿಮಿಷ ಕುಳಿತುಕೊಳ್ಳುತ್ತೇವೆಂದರು. ಆದರೆ ಸುಮಾರು 1.00 ಗಂಟೆ ಕಾಲ National High way block ಮಾಡಿದ್ದ ರಿಂದಾಗಿ ಸುಮಾರು ಕಿಲೋ ಮೀಟರ್‌ಗಟ್ಟಲೆ Traffic block ಆಯಿತು. ಆಗಲೂ ನಮ್ಮ ಪೊಲೀಸಿನವರು ಏನೂ ಮಾಡಲಿಲ್ಲ. ಸುಮ್ಮನೆ ಇದ್ದರು. ಆದರೆ, ಯಾರು ಸುವರ್ಣಸೌಧವನ್ನು ನೋಡಬೇಕು, ಕಲಾಪದಲ್ಲಿ ಭಾಗವಹಿಸಬೇಕೆಂದು ಇನ್ನೊಂದು ಲೈನಿನಲ್ಲಿ ಬರುತ್ತಿದ್ದ ಸಾರ್ವಜನಿಕರು ಮತ್ತು ಅಲ್ಲಿ ಹೋಗುತ್ತಿದ್ದ NWKRTC ಬಸ್ಸುಗಳು, ಖಾಸಗಿ ಕಾರುಗಳು, ಖಾಸಗಿ ಮೋಟಾರ್ ಬೈಕುಗಳಲ್ಲಿ ಹೋಗುತ್ತಿರುವವರನ್ನು ಹಿಡಿದು ಥಳಿಸಿ ಅವರನ್ನು ಹೊಡೆಯುವಂಥ ಪ್ರಯತ್ನ ಮಾಡಿದರು. ನಮ್ಮ ಹತ್ತಿರ ಅದೆಲ್ಲಾ visuals ಇದೆ. ಯಾವಾಗ ನಾಗರಿಕರನ್ನೇ ಹೊಡೆಯುವಂಥ ಪ್ರವೃತ್ತಿ ಆಯಿತೋ, ಆ ಸಂದರ್ಭದಲ್ಲಿ ಪೊಲೀಸರು ಅವರನ್ನು ತಡೆಯುವಂಥ ಪ್ರಯತ್ನ ಮಾಡಿದರು. ಆಗ ಅವರು ಬ್ಯಾರಿಕೇಡ್‌ಗಳನ್ನು ಕಿತ್ತು ಹಾಕುವಂಥ ವ್ಯವಸ್ಥೆಯಾಯಿತು. ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಏಟು ಬಿತ್ತು, ನಮ್ಮವರು ಸುಮ್ಮನೆ ಇದ್ದರು. ಸರ್ಕಲ್ ಇನ್ಸ್‌ಪೆಕ್ಟರ್‌ಗೂ ಏಟು ಬಿದ್ದಾಗ ಸುಮ್ಮನಿದ್ದರು. ಯಾವಾಗ ಸ್ವತಃ ಎಸ್.ಪಿ.ಯವರಿಗೆ ಏಟಾಗಿ ಅವರಿಗೆ 8 ಸ್ಟಿಚಸ್ ಆಯಿತು.

ಅದಾದ ಮೇಲೆ ಅವರು ಮತ್ತೆ ಅದೇ ಸ್ಥಳಕ್ಕೆ ಬಂದು ಅದನ್ನೆಲ್ಲಾ ಕಂಟ್ರೋಲ್ ಮಾಡಿದರು.

ಮತ್ತೆ ಅವರಿಗೆ 4–5 ಗಂಟೆಯಲ್ಲಿ unconscious ಆಯಿತು. ಆಸ್ಪತ್ರೆಗೆ ಹೋಗಿ scanning ಮಾಡಿಕೊಂಡು ಮತ್ತೆ ಅವರು dutyಗೆ ಬಂದು ಅವರ ಕರ್ತವ್ಯವನ್ನು ನಿಭಾಯಿಸಿದ್ದಾರೆ. ನಾನು ಹೇಳುವಂಥಾದ್ದು ಏನೆಂದರೆ, ಇದರಲ್ಲಿ ಯಾರ ತಪ್ಪು, ಯಾರದು ಸರಿ ಎನ್ನುವ ಪ್ರಶ್ನೆಯಲ್ಲ. ಇವತ್ತು ಅವರು ಮನವಿ ಕೊಟ್ಟಂತಹ ಸಂದರ್ಭದಲ್ಲಿ ಅವರು ನಿಗದಿಯಾಗಿದ್ದಂತಹ ಸ್ಥಳದಲ್ಲಿ ಕುಳಿತಿದ್ದರೆ, ಈ ಸಮಸ್ಯೆಯೇ ಬರುತ್ತಿರಲಿಲ್ಲ. ನಮ್ಮವರಲ್ಲ ಇದನ್ನು ಮಾಡಿದ್ದು, ಬೇರೆ ಬೇರೆಯವರು ಬಂದು ಈ ಪ್ರತಿಭಟನೆಯಲ್ಲಿ ಸೇರಿದ್ದರೆಂದು ಕೆಲವು ಮುಖಂಡರು ವಿನಂತಿಯನ್ನು ಕೊಟ್ಟಿದ್ದಾರೆ. ಅವರು ಯಾರು ಎಂದು identify ಮಾಡಬೇಕಾಗಿದೆ. ಈ entire ಘಟನೆಯನ್ನು ಪೊಲೀಸರು ಚಿತ್ರೀಕರಣ ಮಾಡಿದ್ದಾರೆ. ಯಾರು ಅಪರಾಧಿಗಳಿದ್ದಾರೋ, ಅವರ ವಿರುದ್ಧ ಮಾತ್ರವೇ ನಾವು ಕೇಸುಗಳನ್ನು ಹಾಕಿದ್ದೇವೆ. ಕೆಲವರು ನಿರಪರಾಧಿಗಳನ್ನೂ ಬಂಧಿಸಿದ್ದಾರೆ, ಅವರ ಮೇಲೆ ಕೇಸ್‌ಗಳಿರುವುದನ್ನು ತೆಗೆಯಬೇಕು ಎಂದು ನಮ್ಮ ಶಾಸಕರು ಹೇಳುತ್ತಿದ್ದಾರೆ. ಅವರ ಮೇಲೆ ಕೇಸ್‌ಗಳೇನು ಹಾಕಿದೆಯೋ, ಅದನ್ನು ನೀವು ಮನವಿ ಮಾಡಿರುವುದರಿಂದ, ನಿಮ್ಮ ಮನವಿಯನ್ನು ನಾವು consider ಮಾಡಿ, ಯಾರ್ಯಾರ ಮೇಲೆ ಸುಳ್ಳು ಕೇಸ್‌ಗಳನ್ನು ಹಾಕಿದೆಯೋ, ಅದನ್ನು ನೂರಕ್ಕೆ ನೂರರಷ್ಟು ಪರ್ಸೆಂಟ್ ತೆಗೆಯುವಂಥಾದ್ದು ಮಾಡುತ್ತೇವೆ. ವಿಶೇಷವಾಗಿ ಮಾದಿಗ ದಂಡೋರದ ಹೋರಾಟ ಏನಿದೆಯೋ, ಆ ನಾಯಕರುಗಳ ಮೇಲೆ ಏನು ಕೇಸ್ ಗಳಿವೆಯೋ, ಅದನ್ನು ಕಾನೂನು ರೀತಿಯಲ್ಲಿ ಯೋಚನೆ ಮಾಡಿ, ಅದನ್ನು ಮುಂದಿನ ದಿನಗಳಲ್ಲಿ ಕ್ಯಾಬಿನೆಟ್ ಮುಂದೆ ತರುವಂಥಾದ್ದು ಅಥವಾ ಕಾನೂನು ಪರಿಶೀಲನೆ ಮಾಡಿ, ಅವರ ಮೇಲೂ ಇರುವಂತಹ ಕೇಸ್‌ಗಳನ್ನು ವಾಪಸ್ ಪಡೆಯುವಂತಹ ದಾರಿಯನ್ನು ಹುಡುಕುವಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಇಲ್ಲಿ

ಈ ಒಂದು ಘಟನೆ ಏನಾಯಿತು, ಈ ಘಟನೆಯಲ್ಲಿ ಪೊಲೀಸರು ಲಾಠಿ ಏಟು ಮಾಡಿದ್ದಾರೆ. ಇದರಲ್ಲಿ ಪೊಲೀಸರು ಏನಾದರೂ ತಪ್ಪಿತಸ್ಥರು ಆಗಿದ್ದಲ್ಲಿ, ಈ ಬಗ್ಗೆ ತನಿಖೆ ಮಾಡಲು ಇದನ್ನು ಹಿರಿಯ ಅಧಿಕಾರಿಗಳಿಗೆ ನಾವು ವಹಿಸಿದ್ದೇವೆ. ಅವರು ಅದನ್ನು ತನಿಖೆ ಮಾಡುತ್ತಾರೆ. ಯಾರೇ ತಪ್ಪಿತ ಸ್ಥರಿದ್ದರೂ, ಹೀನಾಯವಾಗಿ ಹೊಡೆಯುವುದನ್ನು ಯಾರು ಒಪ್ಪುವುದಕ್ಕಾ ಗುವುದಿಲ್ಲ. ಅದರಲ್ಲೂ ನಾವು ವಿಶೇಷವಾಗಿ ನಾವು ರೈತರ ಚಳುವಳಿಯನ್ನೂ ದೂರ ನಿಲ್ಲಿಸಿದ್ದೆವು. ಮಹಾರಾಷ್ಟ್ರ ಏಕೀಕರಣದವರನ್ನೂ ಒಂದು ಕಿ.ಮೀ. ಆಚೆ ನಿಲ್ಲಿಸಿದ್ದೆವು. ಆದರೂ ಇವರು ನಮ್ಮ ದಲಿತ ಹೋರಾಟದ ಪರವಾಗಿ ಬಂದಿರುವವರು ಎನ್ನುವುದಕ್ಕೋಸ್ಕರ ಸ್ವಲ್ಪ ಅವರಿಗೆ liberal ಆಗಿ ಕೊಟ್ಟು, ನಾವು ಅವರಿಗೆ ಇಲ್ಲಿಗೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿವು. ಆದರೆ ಕೆಲವು ಕಿಡಿಗೇಡಿಗಳು ಈ ಕೆಲಸ ಮಾಡಿದ್ದಾರೆ. ನಾನು ಆ ಸಂಘಟನೆ ಯವರು ಈ ಕೆಲಸ ಮಾಡಿದ್ದಾರೆ ಎನ್ನುವುದಿಲ್ಲ, ಕೆಲವು ಕಿಡಿಗೇಡಿಗಳು ಮಾಡಿದ್ದಾರೆ. ಯಾರು ಮಾಡಿದ್ದಾರೋ, ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ. ಈಗ ನಾವು ಯಾರನ್ನೂ ಸಹ ಬಂಧಿಸಿಲ್ಲ ತಾವು ನನ್ನ ಹತ್ತಿರ ಬಂದಿದ್ದೀರಿ, ಅವತ್ತು ನಾನು Guest House ನಲ್ಲಿದ್ದೆ. ಆ ಸಂದರ್ಭದಲ್ಲಿ ರಾತ್ರಿ ತಾವು ಕಾಳಜಿ ವಹಿಸಿ ನನ್ನ ಹತ್ತಿರ ಬಂದು, ಇದರ ಬಗ್ಗೆ ಹೇಳಿದಿರಿ. ಕೂಡಲೇ ಅವರನ್ನೆಲ್ಲಾ ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡುತ್ತೇನೆ ಎಂದು ನಾನು ಹೇಳಿದೆ. ತಮಗೆ ಮಾತು ಕೊಟ್ಟಂತೆ ಕೂಡಲೇ ಅವರನ್ನೆಲ್ಲಾ ರಾತ್ರಿಯೇ ಬಿಡುಗಡೆ ಮಾಡಿದ್ದೇವೆ. ಈಗ ಯಾರೂ ಪೊಲೀಸ್ ಸ್ಟೇಷನ್‌ನಲ್ಲಿ ಇಲ್ಲ. ಮುಂದಿನ ದಿನಗಳಲ್ಲೂ ಕೂಡ ಯಾರು ಅಮಾಯಕರಿದ್ದಾರೋ, ಅವರ ಮೇಲೆ ಯಾವುದೇ ನಾವು ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವಂತಹ ಮಾತನ್ನು ಹೇಳಿ, ತಾವು ಏನು ಇದಕ್ಕೆ ಸ್ಪಂದನೆ ಮಾಡಿದ್ದೀರೋ, ಸರ್ಕಾರ ನಿಮ್ಮ ಜೊತೆ ಇದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ :– ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು :– ಆಯಿತಲ್ಲಾ, ಇದು ಶೂನ್ಯ ವೇಳೆ.

ಶ್ರೀ ವೀರಭದ್ರಪ್ಪ ಹಾಲಹರವಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಹೇಳಿದ ಪ್ರಕಾರ, ನಾನು ವಿನಂತಿ ಮಾಡಿದ ಮೇಲೆ ಆ ಕೆಲಸವನ್ನು ಮಾಡಿದ್ದಾರೆ. ಆದರೆ, ಆ ಘಟನೆ ಬಗ್ಗೆ ಕೂಲಂಕಷ ತನಿಖೆ ಆಗಬೇಕು. ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಮನವಿ ಕೊಡಲಿಕ್ಕೆ ಬಂದ ವರಿಗೆ, ನಿಶ್ಚಿತವಾಗಿಯೂ, ಸತ್ಯವಾಗಿಯೂ, ಗಲಾಟೆ ಮಾಡಬೇಕು, ಸರ್ಕಾರಕ್ಕೆ ತೊಂದರೆ ಮಾಡಬೇಕು, ಸಾರ್ವಜನಿಕರಿಗೆ ತೊಂದರೆ ಮಾಡಬೇಕು ಎನ್ನುವ ಉದ್ದೇಶ ಎಳ್ಳಷ್ಟೂ ಇರಲಿಲ್ಲ. ಆದರೆ ನಾನೂ ಕೂಡ ಅರ್ಥ ಮಾಡಿಕೊಳ್ಳುತ್ತೇನೆ. ಕಾನೂನು ಸುವ್ಯವಸ್ಥೆ ಕಾಪಾಡುವ ಸಂದರ್ಭದಲ್ಲಿ...

ಅಧ್ಯಕ್ಷರು :– ಇದು ಶೂನ್ಯ ವೇಳೆ. ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರಲ್ಲಾ?. ಮತ್ತೆ ಮತ್ತೆ ಅದನ್ನೇ ಪ್ರಸ್ತಾಪಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನಿಮ್ಮ ಎಲ್ಲಾ ಬೇಡಿಕೆಗಳಿಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಮತ್ತೇನು?

ಶ್ರೀ ವೀರಭದ್ರಪ್ಪ ಹಾಲಹರವಿ :– ರಾಜ್ಯದಾದ್ಯಂತ 20 ಸಾವಿರ ಜನ ಬಂದು ಅಲ್ಲಿ ಸೇರಿದ್ದರು. ಅದರಲ್ಲಿ ಈ ಮಾರುತಿ ಮಾದಾರ, ಗ್ರಾಮ ಸಹಾಯಕ ಇವರು ಹೋರಾಟಕ್ಕೇ ಬಂದಿಲ್ಲ. ಇದಲ್ಲದೆ ಕೊಟ್ರೇಶ್ ಎಂಬುವವರು ಪತ್ರಿಕೆಯೊಂದನ್ನು ನಡೆಸುತ್ತಾರೆ...

ಅಧ್ಯಕ್ಷರು : ಈಗ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ಲಾ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು. ಇನ್ನೇನು ಬೇಕು?

ಶ್ರೀ ವೀರಭದ್ರಪ್ಪ ಹಾಲಹರವಿ :– ಆಯಿತು, ಅಧ್ಯಕ್ಷರೆ.

ಅಧ್ಯಕ್ಷರು :– ಈಗ ಪೂರಕ ಕಾರ್ಯಕಲಾಪಗಳು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಅಭಯ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಲು ದಯವಿಟ್ಟು ನಮಗೆ ಐದು ನಿಮಿಷಗಳ ಕಾಲಾವಕಾಶ ಕೊಡಿ.

ಅಧ್ಯಕ್ಷರು :– ನೀವು ದಯವಿಟ್ಟು ಕುಳಿತುಕೊಳ್ಳಿ. ಆಡಳಿತ ಪಕ್ಷದ ವರಾದ ನೀವೇ ಹೀಗೆ ಮಾಡಿದರೆ ಹೇಗೆ?